Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 86/2019

ಪ್ರಾ.ಸಾ. 5 ಚಾ.ಸಾ. 1

| | | |
|---|---|---|
| ಹೆಸರು | : | ವೀರಣ್ಣ |
| ತಂದೆಯ ಹೆಸರು | : | ಶಿವಶರಣಪ್ಪ ಮಗ್ಗಿ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಸಿಪಿಐ ಬ್ಯಾಡರಳ್ಳಿ ಪೊಲೀಸಠಾಣೆ ಬೆಂಗಳೂರು ನಗರ |
| ವಾಸ | : | ಬೆಂಗಳೂರು |

## ಪ್ರಮಾಣ ವಚನ ಭೋಧಿಸಿದ ದಿನಾಂಕಃ 27-03-2024 ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು ಮೇ-2015 ರಿಂದ ಜೂನ್ -2016 ರ ವರೆಗೆ ಯಾದಗಿರಿ ಗ್ರಾಮೀಣ ಠಾಣೆಯಲ್ಲಿ ಪಿಎಸಐ ಎಂದು ಕರ್ತವ್ಯ ನಿರ್ವಹಿಸಿದ್ದು ಇರುತ್ತದೆ.

2. ದಿಃ 15-5-2015 ರಂದು ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ಅವರ ಪತ್ರ ಸಂಖ್ಯೆ: 578/2015 ದಿನಾಂಕಃ 12-05-2015 ರಲ್ಲಿ ನಮ್ಮ ಠಾಣೆಗೆ ಆದೇಶಿಸಿದ್ದೇನೆಂದರೆ ಮಹಾರಾಷ್ಟ್ರ ರಾಜ್ಯದ ಅಕಲೋಜ ಪೊಲೀಸಠಾಣೆ ಗುನ್ನೆ ನಂ. 132/2012 ಕಲಂ. 302, 201, 147, 148, 149 ಐಪಿಸಿ ಕೇಸನಲ್ಲಿ ಆರೋಪಿತರ ವಿರುದ್ದ ಸರಹದ್ದು ಆಧಾರದ ಮೇಲೆ ಗುನ್ನೆ ದಾಖಲು ಮಾಡಿಕೊಂಡು ತನಿಖೆ ಮಾಡಲು ಮಾನ್ಯ ಉಚ್ಛ ನ್ಯಾಯಾಲಯ ಮುಂಬೈ ಮಹಾರಾಷ್ಟ್ರ ರವರು ಆದೇಶ ನೀಡಿದ್ದು ಈ ಬಗ್ಗೆ ಗುನ್ನೆ ದಾಖಲೆ ಮಾಡಿಕೊಂಡು ಮರು ತನಿಖೆ ಮಾಡಲು ಆದೇಶಿಸಿದ್ದು ಇರುತ್ತದೆ. ಈ ಬಗ್ಗೆ ಗುನ್ನೆ ದಾಖಲು ಮಾಡಿಕೊಳ್ಳಲು ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ದೃಢೀಕರಣ ದಾಖಲಾತಿಗಳನ್ನು ನೀಡುವಂತೆ ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ರವರಿಗೆ ಪತ್ರದ ಮುಖಾಂತರ ವಿನಂತಿಸಿಕೊಂಡಿದ್ದು ನ್ಯಾಯಾಲಯವು ದಿನಾಂಕಃ 19-05-2015 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕನ್ನಡ ಭಾಷೆಗೆ ಅನುವಾದಿಸಿದ ದೃಢೀಕೃತ ದಾಖಲಾತಿಗಳನ್ನು ಒದಗಿಸಿದ್ದು ಇರತ್ತದೆ. ನಾನು ಸದರಿ ದಾಖಲಾತಿಗಳನ್ನು ಕುಲಂಕುಷವಾಗಿ ಪರಿಶೀಲಿಸಲಾಗಿ

ದಾಖಲಾತಿಗಳಲ್ಲಿ ಇರುವ ಸಾರಾಂಶದ ಆಧಾರದ ಮೇಲೆ ನಾನು 7 ಜನ ಆರೋಪಿತರ ವಿರುದ್ಧ ಹೊಸದಾಗಿ ಗುನ್ನೆ ದಾಖಲು ಮಾಡಿಕೊಂಡು ತನಿಖೆ ನಿರ್ವಹಿಸುವ ಸಲುವಾಗಿ ಪ್ರಕರಣಕ್ಕೆ ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳು ದಿಃ **19-05-2015** ರಂದು ಸಂಜೆ **5-00** ಗಂಟೆಗೆ ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ಇಂದ ಪಡೆದುಕೊಂಡ ಎಲ್ಲ ದೃಢೀಕೃತ ದಾಖಲಾತಿಗಳೊಂದಿಗೆ ಗುನ್ನೆ ದಾಖಲು ಮಾಡುವ ಸಲುವಾಗಿ ಸರಕಾರಿ ತರ್ಫೆ ಫಿರ್ಯಾದಿಯಾಗಿ ನನಗೆ ಒಪ್ಪಿಸಿದ್ದು ಇದರ ಆಧಾರದ ಮೇಲೆ ವರದಿಯನ್ನು ತಯಾರಿಸಿ ಠಾಣಾಧಿಕಾರಿಗೆ ನೀಡಿರುತ್ತೇನೆ. ಅದನ್ನು ಆಧರಿಸಿ ಅವರು ಮುಂದಿನ ಕ್ರಮ ಕೈಕೊಂಡಿರುತ್ತಾರೆ.

3. ನನ್ನ ವರದಿಯ ಸಾರಾಂಶ ದಿಃ **21-05-2012** ರಿಂದ **23-05-2012** ರ ವರೆಗಿನ ಈ ಕಾಲವದಿಯಲ್ಲಿ ಈ ಪ್ರಕರಣದಲ್ಲಿ 7 ಜನ ಆರೋಪಿತರು ಎಲ್ಲರೂ ಸೇರಿ ಮೃತ ಅಮರದೇವಿದಾಸ ತಂದೆ ಸದಾಶಿವ ಕಾಂಬಳೆ ಈತನು ರತ್ನವಿಹಾರ ಅಕ್ಕೊಳ್ಜನಲ್ಲಿ ಇರುತ್ತಿದ್ದಾಗ ಆರೋಪಿ ನಂ.1 ನೇಯವನು ಯಾದಗಿರಿಗೆ ಕರೆಸಿಕೊಂಡಾಗ ಮೃತನು ಶಶಿಕಾಂತ ಉರ್ಪು ಬಿಟ್ಟು ದಾದಾ ಕಾಂಬಾಳೆ, ಬಾಬಾ ಅಲಿಯಾ ಬಾಬು ಅಹ್ಮದ ಶೇಖ ಇವರ ಜೊತೆ ಯಾದಗಿರಿಗೆ ಹೋದಾಗ ಸರಕಾರಿ ದವಾಖಾನೆ ಯಾದಗಿರಿಯಲ್ಲಿ ಅಘಾತದಲ್ಲಿ ಗಾಯಗೊಂಡ ರಾಜು ನಾರಾಯಣ ದೋತ್ರೆ ಈತನನ್ನು ನೋಡಲು ಹೋದಾಗ ಆರೋಪಿತರೆಲ್ಲರೂ ಗುಂಪು ಮಾಡಿಕೊಂಡು ಮೃತನು ಪಾಕೇಟ ಹೊಡೆಯುವ ಕೆಲಸದಲ್ಲಿಯ ಹಣದ ಹಿಸ್ಸಾ ಸರಿಯಾಗಿ ಕೊಡುವುದಿಲ್ಲ ಎಂದು ಹಣ ನುಂಗಿ ಗದ್ದಾರಿ ಮಾಡುತ್ತಾನೆ ಹಾಗೆಯೇ ಅವನು ಮೇ ತಿಂಗಳಲ್ಲಿ ಊರಿಗೆ ಹೋಗುವಾಗ ಪಾಕೇಟ ಹೊಡೆದ ಹಣ 50,000/- ಒಬ್ಬನೇ ಇಟ್ಟುಕೊಂಡಿದ್ದಾನೆ ಎಂಬ ಕಾರಣದಿಂದ ಸಿಟ್ಟಿಗೆದ್ದು ಅವನಿಗೆ ಕೊಲೆ ಮಾಡುವ ಉದ್ದೇಶದಿಂದ ಯಾದಗಿರಿ ಸರಕಾರಿ ಆಸ್ಪತ್ರೆಯ ಮುಂದೆ ಹೊಡೆಬಡೆ ಮಾಡಿ ಅವನಿಗೆ ಅಟೋ ರೀಕ್ಷಾದಲ್ಲಿ ಠಾಣಗುಂದಿಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿ ನಂ.1 ಕಟ್ಟಿಗೆ, ಬಡಿಗೆ, ಕಬ್ಬಿಣದ ಸಲಾಕೆ ಮತ್ತು ಚಿಗರಿಯ ಸಿಂಗ, ಇದರಿಂದ ಹೊಡೆಬಡೆ ಮಾಡಿ ನಂತರ ಠಾಣಾಗುಂದಿ ಸೀಮೆಯ ಗಂಗಪ್ಪ ತಂದೆ ಅಯ್ಯಪ್ಪ ಸಜ್ಜನ ಇವರ ಹೊದಲ್ಲಿ ಕರೆದುಕೊಂಡು ಹೋಗಿ ಅಲ್ಲಿಯೂ ಮೇಲ್ಕಂಡ ಸಾಮಾನುಗಳಿಂದ ಹೊಡೆದು ಕೊಲೆ ಮಾಡಿ ಅವನ ಹೆಣವನ್ನು ಮಣ್ಣಿನಲ್ಲಿ ಮುಚ್ಚಿ ನಂತರ ರಾತ್ರಿ ಆ ಹೆಣವನ್ನು ಹೊರಗೆ ತೆಗೆದು ತುಕಡಿ ಮಾಡಿ ಹೆಣವನ್ನು ಕಟ್ಟಿಗೆ ಮತ್ತು ಪೆಟ್ರೋಲ್ ಸಹಾಯದಿಂದ ಸುಟ್ಟು ಬುದಿಯನ್ನು ಚೀಲದಲ್ಲಿ ತುಂಬಿ ಒಗೆದು ಕೊಲೆಯ ಪುರಾವೆಯನ್ನು ನಾಶಪಡಿಸಿದ್ದು ಇರುತ್ತದೆ ಎಂಬ ಸಾರಾಂಶ ಇರುತ್ತದೆ. ಸದರಿ ವರದಿಯನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. ಜೆ.ಎಮ್.ಎಫ್.ಸಿ. ನ್ಯಾಯಾಲಯದಿಂದ ಬಂದ ಎಲ್ಲ ದಾಖಲೆಗಳನ್ನು ಒಟ್ಟಾಗಿ ನಿ.ಪಿ.12 ಎಂದು ಗುರುತಿಸಲಾಯಿತು.

4. ದಿಃ 6-7-2015 ರಂದು ಆರೋಪಿ ಅಫಸರ ಮಹಿಬೂಬ ಸೇಖ ತಂದೆ ಮಹಿಬೂಬ ಸೇಖ ಈತನು ಇರುವಿಕೆಯ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಯರವಾಡ ಪೊಲೀಸಠಾಣೆಯ ಸರಹದ್ದಿನ ಲಕ್ಷ್ಮಿ ನಗರದಲ್ಲಿ ಆರೋಪಿತನಿಗೆ ಸಂಜೆ 7-30 ಗಂಟೆಗೆ ಹಿಡಿದುಕೊಂಡು ಯರವಾಡ ಪೊಲೀಸಠಾಣೆಗೆ ಮತ್ತು ಅಫಸರನ ತಂದೆಯಾದ ಮಹಿಬೂಬ ಸೇಖ ಈತನಿಗೆ ಮಾಹಿತಿ ನೀಡಿ ಆತೋತನೊಂದಿಗೆ ದಿಃ 7-7-2015 ರಂದು ಬೆಳಿಗ್ಗೆ 9-30 ಗಂಟೆಗೆ ತನಿಖಾಧಿಕಾರಿಯಾದ ಚಾಸಾ-36 ರವರ ಮುಂದೆ ಹಾಜರಪಡಿಸಿದ್ದು ಇರುತ್ತದೆ. ಸದರಿ ವರದಿಯನ್ನು ನಿ.ಪಿ.13 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಸದರಿ ಆರೋಪಿ ಗೈರು ಹಾಜರಾಗಿದ್ದು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆತನನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಕೀಲರು ನುಡಿದಿರುತ್ತಾರೆ.

5. ಪ್ರಕರಣದಲ್ಲಿ ಇನ್ನುಳಿದ ಆರೋಪಿತರ ಪತ್ತೆಗಾಗಿ ದಿಃ 15-7-2015 ರಂದು ಶಹಾಪೂರ, ಜೇವರ್ಗಿ, ಕಲಬುರಗಿ ಕಡೆಗೆ ಹೋಗಿ ಸದರಿ ಆರೋಪಿತರ ಮೋಬಾಶೇಖ ಅಲಿಯಾಸ ಮೋಸಿನ ತಂದೆ ಬಡೆಸಾಬ ಶೇಖ ಈತನ ಬಗ್ಗೆ ಪೊಲೀಸ ಬಾತ್ಮಿದಾರರಿಗೆ ವಿಚಾರಿಸಿದ್ದು ಆರೋಪಿತರ ಇರುವಿಕೆಯ ಬಗ್ಗೆ ಯಾವುದೇ ಉಪಯುಕ್ತ ಮಾಹಿತಿ ದೊರಕಿರುವುದಿಲ್ಲ. ಈ ಬಗ್ಗೆ ವರದಿ ನೀಡಿದ್ದು ಸದರಿ ವರದಿಯನ್ನು ನಿ.ಪಿ.14 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.

6. ದಿಃ 20-7-2015 ರಂದು ಆರೋಪಿತರ ಮೋಬಾಶೇಖ ಅಲಿಯಾಸ ಮೋಸಿನ ತಂದೆ ಬಡೆಸಾಬ ಶೇಖ ಮತ್ತು ಲಾಲೆ ಠಾಣಾಗುಂದಿ ಇವರ ಪತ್ತೆ ಕುರಿತು ಶಹಾಬಾದ, ಕಲಬುರಗಿ ಕಡೆಗೆ ಹೋಗಿ ಸದರಿ ಆರೋತಪಿರ ಬಗ್ಗೆ ಪೊಲೀಸ ಬಾತ್ಮಿದಾರರಿಗೆ ವಿಚಾರಿಸಿದ್ದು ಆರೋಪಿತರ ಇರುವಿಕೆಯ ಬಗ್ಗೆ ಯಾವುದೇ ಉಪಯುಕ್ತ ಮಾಹಿತಿ ದೊರಕಿರುವುದಿಲ್ಲ. ಈ ಬಗ್ಗೆ ವರದಿ ನೀಡಿದ್ದು ಸದರಿ ವರದಿಯನ್ನು ನಿ.ಪಿ.15 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಉಳಿದ ಆರೋಪಿತರನ್ನು ನೋಡಿ ಗುರುತಿಸಿದ್ದು ಇರುತ್ತದೆ.

<u>ಪಾಟೀ ಸವಾಲು 8 ನೇ ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

7. 2015 ರಲ್ಲಿ ಯಾದಗಿರಿ ಸರಕಾರಿ ಆಸ್ಪತ್ರೆ ನ್ಯಾಯಾಲಯದ ಪಕ್ಕ ಇತ್ತು ಎಂದರೆ ಸರಿ. ಆಸ್ಪತ್ರೆಯಲ್ಲಿ ಓ.ಪಿ. ಇತ್ತು. ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ಓ.ಪಿ. ಠಾಣೆಯಿಂದ ಫೋನ್ ಮಾಡಿದ್ದರು. ನಾವು ಹೋಗುವಷ್ಟರಲ್ಲಿ ಗಾಯಾಳು ಅವರ ಗ್ರಾಮಕ್ಕೆ ಹೋಗಿದ್ದರು. ನಾವು ಅವರನ್ನು ಪ್ರತ್ತೆ ಹಚ್ಚುವ ಪ್ರಯತ್ನ ಮಾಡಿರುವುದಿಲ್ಲ. 2012 ರಲ್ಲಿ ಇದ್ದ ಪಿಎಸಐ ಅವರಿಗೆ ಫೋನ್ ಮಾಡಿ ಮಾಹಿತಿ ಕೇಳಿದ್ದೆ. ಆಗ ಪಿಎಸಐ ಯಾರು ಇದ್ದರು ಎಂದು ನನಗೆ ನೆನಪಿಲ್ಲ.

ಈ ಸಾರಾಂಶ ನ್ಯಾಯಾಲಯದ ಯಾವ ದಾಖಲಾತಿಯಿಂದ ತಿಳಿದು ಬಂದಿದೆ ಎಂದು ಅಲ್ಲಿ ದಾಖಲಾದ ಪ್ರ.ವ. ವರದಿ, ಪಂಚನಾಮೆ, ದೋಷಾರೋಪಣಾ ಪಟ್ಟಿ ಇವುಗಳಿಂದ ನನಗೆ ಮಾಹಿತಿ ತಿಳಿಯಿತು. ಈ ಪ್ರಕರಣದ ಸಾರಾಂಶ ಯಾವ ರೀತಿ ತಿಳಿದು ಬಂತು ಎಂದು ನನ್ನ ವರದಿಯಲ್ಲಿ ನಮೂದು ಮಾಡಿಲ್ಲ.

8. ದಿಃ 15-5-2015 ರಂದು ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ಅವರ ಪತ್ರ ಸಂಖ್ಯೆ: 578/2015 ದಿನಾಂಕಃ 12-05-2015 ರಲ್ಲಿ ನಮ್ಮ ಠಾಣೆಗೆ ಆದೇಶಿಸಿದ್ದೇನೆಂದರೆ ಮಹಾರಾಷ್ಟ್ರ ರಾಜ್ಯದ ಅಕಲೋಜ ಪೊಲೀಸಠಾಣೆ ಗುನ್ನೆ ನಂ. 132/2012 ಕಲಂ. 302, 201, 147, 148, 149 ಐಪಿಸಿ ಕೇಸನಲ್ಲಿ ಆರೋಪಿತರ ವಿರುದ್ಧ ಸರಹದ್ದು ಆಧಾರದ ಮೇಲೆ ಗುನ್ನೆ ದಾಖಲು ಮಾಡಿಕೊಂಡು ತನಿಖೆ ಮಾಡಲು ಮಾನ್ಯ ಉಚ್ಛ ನ್ಯಾಯಾಲಯ ಮುಂಬೈ ಮಹಾರಾಷ್ಟ್ರ ರವರು ಆದೇಶ ನೀಡಿದ್ದು ಈ ಬಗ್ಗೆ ಗುನ್ನೆ ದಾಖಲೆ ಮಾಡಿಕೊಂಡು ಮರು ತನಿಖೆ ಮಾಡಲು ಆದೇಶಿಸಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಗುನ್ನೆ ದಾಖಲು ಮಾಡಿಕೊಳ್ಳಲು ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲ ದೃಢೀಕರಣ ದಾಖಲಾತಿಗಳನ್ನು ನೀಡುವಂತೆ ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ರವರಿಗೆ ಪತ್ರದ ಮುಖಾಂತರ ವಿನಂತಿಸಿಕೊಂಡಿದ್ದು ನ್ಯಾಯಾಲಯವು ದಿನಾಂಕಃ 19-05-2015 ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕನ್ನಡ ಭಾಷೆಗೆ ಅನುವಾದಿಸಿದ ದೃಢೀಕೃತ ದಾಖಲಾತಿಗಳನ್ನು ಒದಗಿಸಿದ್ದು ಇರತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಾಖಲಾತಿಗಳನ್ನು ಕುಲಂಕುಷವಾಗಿ ಪರಿಶೀಲಿಸಲಾಗಿ ದಾಖಲಾತಿಗಳಲ್ಲಿ ಇರುವ ಸಾರಾಂಶದ ಆಧಾರದ ಮೇಲೆ ನಾನು 7 ಜನ ಆರೋಪಿತರ ವಿರುದ್ಧ ಹೊಸದಾಗಿ ಗುನ್ನೆ ದಾಖಲು ಮಾಡಿಕೊಂಡು ತನಿಖೆ ನಿರ್ವಹಿಸುವ ಸಲುವಾಗಿ ಪ್ರಕರಣಕ್ಕೆ ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳು ದಿಃ 19-05-2015 ರಂದು ಸಂಜೆ 5-00 ಗಂಟೆಗೆ ಜೆ.ಎಮ್.ಎಫ್.ಸಿ. ನ್ಯಾಯಾಲಯ ಯಾದಗಿರಿ ಇಂದ ಪಡೆದುಕೊಂಡ ಎಲ್ಲ ದೃಢೀಕೃತ ದಾಖಲಾತಿಗಳೊಂದಿಗೆ ಗುನ್ನೆ ದಾಖಲು ಮಾಡುವ ಸಲುವಾಗಿ ಸರಕಾರಿ ತರ್ಫೆ ಫಿರ್ಯಾದಿಯಾಗಿ ನನಗೆ ಒಪ್ಪಿಸಿದ್ದು ಇದರ ಆಧಾರದ ಮೇಲೆ ವರದಿಯನ್ನು ತಯಾರಿಸಿ ಠಾಣಾಧಿಕಾರಿಗೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಆಧರಿಸಿ ಅವರು ಮುಂದಿನ ಕ್ರಮ ಕೈಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ವರದಿಯ ಸಾರಾಂಶ ದಿಃ 21-05-2012 ರಿಂದ 23-05-2012 ರ ವರೆಗಿನ ಈ ಕಾಲವದಿಯಲ್ಲಿ ಈ ಪ್ರಕರಣದಲ್ಲಿ 7 ಜನ ಆರೋಪಿತರು ಎಲ್ಲರೂ ಸೇರಿ ಮೃತ ಅಮರದೇವಿದಾಸ ತಂದೆ ಸದಾಶಿವ ಕಾಂಬಳೆ ಈತನು ರತ್ನವಿಹಾರ ಅಕ್ಲೋಜನಲ್ಲಿ ಇರುತ್ತಿದ್ದಾಗ ಆರೋಪಿ ನಂ.1 ನೇಯವನು ಯಾದಗಿರಿಗೆ ಕರೆಸಿಕೊಂಡಾಗ ಮೃತನು ಶಶಿಕಾಂತ ಉರ್ಪು

ಬಿಟ್ಟು ದಾದಾ ಕಾಂಬಾಳೆ, ಬಾಬಾ ಅಲಿಯಾ ಬಾಬು ಅಹ್ಮದ ಶೇಖ ಇವರ ಜೊತೆ ಯಾದಗಿರಿಗೆ ಹೋದಾಗ ಸರಕಾರಿ ದವಾಖಾನೆ ಯಾದಗಿರಿಯಲ್ಲಿ ಅಘಾತದಲ್ಲಿ ಗಾಯಗೊಂಡ ರಾಜು ನಾರಾಯಣ ದೋತ್ರೆ ಈತನನ್ನು ನೋಡಲು ಹೋದಾಗ ಆರೋಪಿತರೆಲ್ಲರೂ ಗುಂಪು ಮಾಡಿಕೊಂಡು ಮೃತನು ಪಾಕೇಟ ಹೊಡೆಯುವ ಕೆಲಸದಲ್ಲಿಯ ಹಣದ ಹಿಸ್ಸಾ ಸರಿಯಾಗಿ ಕೊಡುವುದಿಲ್ಲ ಎಂದು ಹಣ ನುಂಗಿ ಗದ್ದಾರಿ ಮಾಡುತ್ತಾನೆ ಹಾಗೆಯೇ ಅವನು ಮೇ ತಿಂಗಳಲ್ಲಿ ಊರಿಗೆ ಹೋಗುವಾಗ ಪಾಕೇಟ ಹೊಡೆದ ಹಣ 50,000/- ಒಬ್ಬನೇ ಇಟ್ಟುಕೊಂಡಿದ್ದಾನೆ ಎಂಬ ಕಾರಣದಿಂದ ಸಿಟ್ಟಿಗೆದ್ದು ಅವನಿಗೆ ಕೊಲೆ ಮಾಡುವ ಉದ್ದೇಶದಿಂದ ಯಾದಗಿರಿ ಸರಕಾರಿ ಆಸ್ಪತ್ರೆಯ ಮುಂದೆ ಹೊಡೆಬಡೆ ಮಾಡಿ ಅವನಿಗೆ ಅಟೋ ರೀಕ್ಷಾದಲ್ಲಿ ಠಾಣಗುಂದಿಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿ ನಂ.1 ಕಟ್ಟಿಗೆ, ಬಡಿಗೆ, ಕಬ್ಬಿಣದ ಸಲಾಕೆ ಮತ್ತು ಚಿಗರಿಯ ಸಿಂಗ, ಇದರಿಂದ ಹೊಡೆಬಡೆ ಮಾಡಿ ನಂತರ ಠಾಣಾಗುಂದಿ ಸೀಮೆಯ ಗಂಗಪ್ಪ ತಂದೆ ಅಯ್ಯಪ್ಪ ಸಜ್ಜನ ಇವರ ಹೊದಲ್ಲಿ ಕರೆದುಕೊಂಡು ಹೋಗಿ ಅಲ್ಲಿಯೂ ಮೇಲ್ಕಂಡ ಸಾಮಾನುಗಳಿಂದ ಹೊಡೆದು ಕೊಲೆ ಮಾಡಿ ಅವನ ಹೆಣವನ್ನು ಮಣ್ಣಿನಲ್ಲಿ ಮುಚ್ಚಿ ನಂತರ ರಾತ್ರಿ ಆ ಹೆಣವನ್ನು ಹೊರಗೆ ತೆಗೆದು ತುಕಡಿ ಮಾಡಿ ಹೆಣವನ್ನು ಕಟ್ಟಿಗೆ ಮತ್ತು ಪೆಟ್ರೋಲ್ ಸಹಾಯದಿಂದ ಸುಟ್ಟು ಬುದಿಯನ್ನು ಚೀಲದಲ್ಲಿ ತುಂಬಿ ಒಗೆದು ಕೊಲೆಯ ಪುರಾವೆಯನ್ನು ನಾಶಪಡಿಸಿದ್ದು ಇರುತ್ತದೆ ಎಂಬ ಸಾರಾಂಶ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 6-7-2015 ರಂದು ಆರೋಪಿ ಅಫಸರ ಮಹಿಬೂಬ ಸೇಖ ತಂದೆ ಮಹಿಬೂಬ ಸೇಖ ಈತನು ಇರುವಿಕೆಯ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಯರವಾಡ ಪೊಲೀಸಠಾಣೆಯ ಸರಹದ್ದಿನ ಲಕ್ಷ್ಮಿ ನಗರದಲ್ಲಿ ಆರೋಪಿತನಿಗೆ ಸಂಜೆ 7-30 ಗಂಟೆಗೆ ಹಿಡಿದುಕೊಂಡು ಯರವಾಡ ಪೊಲೀಸಠಾಣೆಗೆ ಮತ್ತು ಅಫಸರನ ತಂದೆಯಾದ ಮಹಿಬೂಬ ಸೇಖ ಈತನಿಗೆ ಮಾಹಿತಿ ನೀಡಿ ಆತೋತನೊಂದಿಗೆ ದಿಃ 7-7-2015 ರಂದು ಬೆಳಿಗ್ಗೆ 9-30 ಗಂಟೆಗೆ ತನಿಖಾಧಿಕಾರಿಯಾದ ಚಾಸಾ-36 ರವರ ಮುಂದೆ ಹಾಜರಪಡಿಸಿದ್ದು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಇನ್ನುಳಿದ ಆರೋಪಿತರ ಪತ್ತೆಗಾಗಿ ದಿಃ 15-7-2015 ರಂದು ಶಹಾಪೂರ, ಜೇವರ್ಗಿ, ಕಲಬುರಗಿ ಕಡೆಗೆ ಹೋಗಿ ಸದರಿ ಆರೋಪಿತರ ಮೋಬಾಶೇಖ ಅಲಿಯಾಸ ಮೋಸಿನ ತಂದೆ ಬಡೆಸಾಬ ಶೇಖ ಈತನ ಬಗ್ಗೆ ಪೊಲೀಸ ಬಾತ್ಮಿದಾರರಿಗೆ ವಿಚಾರಿಸಿದ್ದು ಆರೋಪಿತರ ಇರುವಿಕೆಯ ಬಗ್ಗೆ ಯಾವುದೇ ಉಪಯುಕ್ತ ಮಾಹಿತಿ ದೊರಕಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 20-7-2015 ರಂದು ಆರೋಪಿತರ ಮೋಬಾಶೇಖ ಅಲಿಯಾಸ ಮೋಸಿನ ತಂದೆ ಬಡೆಸಾಬ ಶೇಖ ಮತ್ತು ಲಾಲೆ ಠಾಣಾಗುಂದಿ ಇವರ ಪತ್ತೆ ಕುರಿತು ಶಹಾಬಾದ, ಕಲಬುರಗಿ ಕಡೆಗೆ ಹೋಗಿ ಸದರಿ ಆರೋತಪಿರ ಬಗ್ಗೆ  ಪೊಲೀಸ ಬಾತ್ಮಿದಾರರಿಗೆ ವಿಚಾರಿಸಿದ್ದು ಆರೋಪಿತರ ಇರುವಿಕೆಯ ಬಗ್ಗೆ ಯಾವುದೇ ಉಪಯುಕ್ತ ಮಾಹಿತಿ ದೊರಕಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು 2, ನೇ ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಕೆ ವಕೀಲರಿಂದ

ಮೇಲಿನ ಪಾಟೀ ಸವಾಲು ಅನುಕರಣೆ ಮಾಡುವದಾಗಿ ಹೇಳಿರುತ್ತಾರೆ.

ಪಾಟೀ ಸವಾಲು **4** ಮತ್ತು *7* ನೇ ಆರೋಪಿತರ ಪರವಾಗಿ ಶ್ರೀ. ಪಿ.ಬಿ.ಪಿ. ವಕೀಲರಿಂದ

ಮೇಲಿನ ಪಾಟೀ ಸವಾಲು ಅನುಕರಣೆ ಮಾಡುವದಾಗಿ ಹೇಳಿರುತ್ತಾರೆ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.